# ಜಾಣೆ ಗುಬ್ಬಿ ಪುಟಾಣಿ

■ ಲಲಿತಾ ಕೆ. ಹೊಸಪ್ಯಾಟಿ
ಕಲೆ: ಸಂತೋಷ್ ಸಸಿಹಿತ್ಲು



ದೊಡ್ಡ ಬೇವಿನ ಮರದ ಕೆಳಗೆ
ಇತ್ತೊಂದು ಹಾವಿನ ಹುತ್ತ
ಬುಸ್ ಬುಸ್ ಹಾವು ಹೆಡೆಯ ಎತ್ತಿ
ನೋಡ್ತಿತ್ತು ಸುತ್ತಮುತ್ತ

ಮರದ ಮೇಲೆ ಅಮ್ಮ ಗುಬ್ಬಿ
ಕಟ್ಕೊಂಡಿತ್ತು ಗೂಡ
ದೀಪದಂತೆ ಕಣ್ಣು ಬಿಟ್ಟು
ಕಾಯ್ತಿತ್ತು ತನ್ನ ಮರಿನ

ಕಡ್ಡಿಲಿ ಹೆಣೆದ ಕದ ಮುಚ್ಚಿ
ಮಾಡ್ತು ಟಾಟಾ ಮರಿಗೆ
ಕಾಳು ತರಲು ದೂರ ಹೋಗುವೆ
ಬರಬೇಡಾ ಪಾಪು ಹೊರಗೆ

ಹೊಂಚು ಹಾಕಿ ಕುಂತೈತಲ್ಲಿ
ಬುಸ್ಸೆನ್ನದೆ ಹಾವು
ಗುಳ್ಳಂ ಅಂತ ನುಂಗಿ ಬಿಡುತ್ತೆ
ನಿನಗೆ ಬರುತ್ತೆ ಸಾವು

ಹಾವನ್ನು ನಾನು ನೋಡೆ ಇಲ್ಲ
ಗುರ್ತಿಸೋದು ಹೆಂಗೆ
ಹಾವಿನ ಹೊಟ್ಟೆ ದೊಡ್ಡದಾಗಿರುತ್ತಾ
ದಿಗಿಲಾತಲ್ಲ ನಂಗೆ

ಕಡ್ಡಿ ಹಂಗೆ ಉದ್ದಕ್ಕಿರುತ್ತೆ
ಸರ ಸರ ಹರಿದಾಡುತ್ತೆ
ನಾಲಿಗೆ ಚಾಚಿ ಹೆಡೆಯ ಬಿಚ್ಚಿ
ಕಣ್ಣು ಬಿಟ್ಕೊಂಡು ಬರುತ್ತೆ

ಇರ್ಲಿ ಬಿಡು ನೋಡ್ಕೋತಿನಿ
ಸಪೂರ ಹಾವು ತಾನೆ
ಭಯ ಬಿಟ್ಟು ಹೋಗಿ ಬಾರೆ
ಕಲಿಸ್ತೀನಿ ಬುದ್ಧಿ ನಾನೆ

ಬೆಂಕಿಯಂತ ಕಣ್ಣು ಬಿಟ್ಟು
ಗೂಡಲ್ಲಿ ಇಣುಕಿತು ಹಾವು
ಕಾಯ್ತಾ ಕುಂತ ಮರಿ ಹಕ್ಕಿ
ತೂಕಕ್ಕಿಲ್ಲ ಪಾವು

ಗೂಡಲ್ಲೊಂದು ಜಾಲಿ ಮುಳ್ಳು
ದಪ್ಪಗೆ ಚೂಪಾಗಿತ್ತು
ಚಿನ್ನಾರಿ ಗುಬ್ಬಿ ಕೈಯಲ್ಲಿಡಿದು
ಆಯುಧ ಮಾಡ್ಕೊಂಡು ನಿಂತು

ಬೆನ್ನಿಗಿಂತ ಹಾವಿನ ಕಣ್ಣು
ಇಣುಕಿತು ಬಾಗಿಲ ತೂರಿ
ಥಳಥಳ ಕೆಂಡದಂತೆ ಕಾಣ್ತು
ಹೊಳೆಯುತ್ತಿತ್ತು ಭಾರಿ

ಎದುರಿಗೆ ನಿಂತ ಗುಬ್ಬಿ ಮರಿಗೆ
ಲೋಕಜ್ಞಾನ ಇತ್ತು
ಕಣ್ಣಿನ ಗುಡ್ಡೆಗೆ ಚುಚ್ಚಿ ಬಿಡ್ತು
ಹಾವಿನ ಕಣ್ಣೆ ಹೋಯ್ತು

ಉರಿ ಉರಿ ಕಣ್ಣುರಿ ಎಂದು
ಬೊಬ್ಬೆ ಹಾಕ್ತು ಹಾವು
ಹಾಡು ಹಗಲೆ ಕತ್ತಲಾತು
ತೆವಳ್ಕೊಂಡು ಸೇರಿತು ತಾವು

ಕಾಳು ಹೆಕ್ಕಿ ತಂದ ಗುಬ್ಬಿಗೆ
ಮುಟ್ಟಿಸ್ತು ಸುದ್ದಿ ಪುಟಾಣಿ
ಅಮ್ಮ ತೋಳಲಿ ತಬ್ಬಿಕೊಂಡು
ಹೇಳಿತು ನೀನು ಜಾಣೆ

---



**ಋತು ಜಿ. ಭಟ್ಟ ತೋಟಮನೆ**
9ನೇ ತರಗತಿ,
ಸರ್ವೋದಯ ಪ್ರೌಢ ಶಾಲೆ, ವಜ್ರಳ್ಳಿ






ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in